MYSORE LEGISLATIVE ASSEMBLY

Tuesday, 27th February 1968

The House met in the Assembly Chamber, Vidhana Soudha, Bangalore at One of the Clock.

MR. DEPUTY SPEAKER (SRI D. MANJUNATH, B.A., B.L.) in the Chair.

STARRED QUESTIONS

(to which oral answers were given)

Establishment of Industrial Co-operative Society at Virajpet

49. Sri N. LOKAYYA NAIK (Virajpet).—

Will the Minister for Development and Co-operation be pleased to state :—

(*a*) when the Industrial Co-operative Society at Virajpet was established ;

(*b*) the amount of loan granted by them to this society ;

(*c*) whether the said loan has been repaid ?

A.—Sri P. M. NADGOUDA (Minister for Development and Co-operation).—

(*a*) In May 1954.

(*b*) Rs. 10,000.

(*c*) No,

ಶ್ರೀ ಎನ್. ಲೋಕಯ್ಯ ನಾಯಕ್.—ಈ ಸೊಸೈಟಿ ಈಗ ಯಾವ ಅವಸ್ಥೆಯಲ್ಲಿದೆ ?

†ಶ್ರೀ ಪಿ. ಎಂ. ನಾಡಗೌಡ.—ಈ ಸೊಸೈಟಿಗೆ 10 ಸಾವಿರ ರೂಪಾಯಿಗಳನ್ನು ಸ್ಪೇಟ್ ಏಡ್ ಟು ಇಂಡಸ್ಟ್ರೀನ್‌ನಿಂದ ಕೊಡಗು ಸರ್ಕಾರದವರು ಕೊಟ್ಟಿದ್ದಾರೆ. ಆ 10 ಸಾವಿರ ರೂಪಾಯಿಗಳಲ್ಲಿ 500 ರೂಪಾಯಿಗಳನ್ನು ಅನಲು ಹಣಕ್ಕೆ ಕೊಟ್ಟಿದೆ. 160 ರೂಪಾಯಿಗಳನ್ನು ಬಡ್ಡಿಗಾಗಿ ಕೊಟ್ಟಿದೆ. ಇನ್ನುಳಿದ 9 ಸಾವಿರ ಚಿಲ್ಲರೆ ಇನ್ನೂ ಆ ಸೊಸೈಟಿಯಿಂದ ಬರಬೇಕಾಗಿದೆ.

ಶ್ರೀ ಎನ್. ಲೋಕಯ್ಯನಾಯಕ್.—ಈ ಸೊಸೈಟಿ ಈಗ ಇನ್ನೂ ಕೆಲಸಮಾಡುತ್ತಿದೆಯೇ ?

---

†Indicates that the remarks or speeches have not been revised by the member concerned

ಶ್ರೀ ಪಿ. ಎಂ. ನಾಡಗೌಡ —ಈ ಸೊಸೈಟಿ ಈಗ ಕೆಲಸಮಾಡುವುದಿಲ್ಲ. ಸರ್ಕಾರದವರು ಅದನ್ನು ಲಿಕ್ವಿಡೇಟ್ ಮಾಡಬೇಕೆಂದು ತಿಳಿಸಿದ್ದಾರೆ. If he wants to preside over the Liquidation Ceremony, Government is prepared to invite him.

ಶ್ರೀ ಎಫ್. ಎಸ್. ಪಾಟೀಲ್.—ಆ ಸೊಸೈಟಿಯ ಡೈರೆಕ್ಟರ್ಸ್ ಯಾರು ಇದ್ದಾರೊ ಅವರು ಕಾಂಗ್ರೆಸ್ಸಿನವರು ಅಲ್ಲದೆ ಬೇರೆ ಯಾರಾದರೂ ಇದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಆ ಮಾಹಿತಿ ಇವತ್ತು ಸಿಕ್ಕುವುದಿಲ್ಲ.

ಶ್ರೀ ಎಫ್. ಎಸ್. ಪಾಟೀಲ್.—ಈ ಸೊಸೈಟಿ ವರ್ಕ್ ಮಾಡುವುದಿಲ್ಲವೆಂದು ಹೇಳಿದ್ದೀರಿ. ಅಂದಮೇಲೆ ಈ ಸೊಸೈಟಿಯನ್ನು ನೂಪರ್‌ಸೀಡ್ ಮಾಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದವರು ಆ ಸೊಸೈಟಿಯ ಲಿಕ್ವಿಡೇಷನ್ನಿಗೆ ಆರ್ಡರ್ ಮಾಡಿದ್ದಾರೆ. ಮಾನ್ಯ ಸದಸ್ಯರು ಏನಾದರೂ ಲಿಕ್ವಿಡೇಷನ್ ಸೇರೆಮೊನಿಗೆ ಪ್ರಿಸೈಡ್ ಮಾಡುವುದಾದರೆ ಇನ್‌ವೈಟ್ ಮಾಡುತ್ತೇವೆ.

ಶ್ರೀ ಬೋಳ ರಘುರಾಮಶೆಟ್ಟಿ.—ಆ ಸೊಸೈಟಿಯ ಲಿಕ್ವಿಡೇಷನ್ ಸೆರೆಮೊನಿಗೆ ಪ್ರಿಸೈಡ್ ಮಾಡುವುದಕ್ಕೆ ನಿಮಗೇನಾದರೂ ಆಹ್ವಾನ ಬಂದಿದೆಯೇ ?

(ಉತ್ತರವಿಲ್ಲ)

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನೀವು ಕೊಟ್ಟ ಸಾಲದ ಬಂಡವಾಳ ಸೊಸೈಟಿಯಲ್ಲಿ ಇದೆಯೇ? ಅದಕ್ಕೆ ದಾತರು ಯಾರು ?

ಶ್ರೀ ಪಿ. ಎಂ. ನಾಡಗೌಡ.—ಅದಕ್ಕೇ ಲಿಕ್ವಿಡೇಷನ್ ಮಾಡಿದೆ. ಸೊಸೈಟಿ ಪರಿಸ್ಥಿತಿ ಬಹಳ ಹೀನ ಪರಿಸ್ಥಿತಿಯಲ್ಲಿದ್ದುದರಿಂದಲೇ ಸರ್ಕಾರದವರು ಅಂತಹ ಉಗ್ರವಾದ ಕ್ರಮವನ್ನು ತೆಗೆದು ಕೊಂಡಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಸೊಸೈಟಿ ಇಷ್ಟು ಹೀನಸ್ಥಿತಿಯಲ್ಲಿ ಬರುವುದಕ್ಕೆ ಅಂತಹ ಅಗಾಧವಾದ ಕಾರಣಗಳು ಏನೇನು ಇದ್ದುವು ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ರೊಕ್ಕ ವಾಪಸು ಬರಲಿಲ್ಲವೆಂಬುದೇ ಅದರ ಹೀನ ಸ್ಥಿತಿಗೆ ಮುಖ್ಯ ಕಾರಣವಾಗಿದೆ.

ಶ್ರೀ ಬೋಳ ರಘುರಾಮಶೆಟ್ಟಿ.—ಸೊಸೈಟಿಯ ಡೈರೆಕ್ಟರುಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ಸೊಸೈಟಿಯು ಲಿಕ್ವಿಡೇಷನ್ ಆಗಿರುವುದರಿಂದ ರೂಲ್ಸ್ ಪ್ರಕಾರ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗದುಕೊಂಡಿದ್ದೇವೆ.

ಶ್ರೀ ಜಿ. ಅಮರೇಗೌಡ.—ರೊಕ್ಕ ಎಲ್ಲಿ ಹೋಯಿತು ?

ಶ್ರೀ ಪಿ. ಎಂ. ನಾಡಗೌಡ.—ಆಡಿಟ್ ವರದಿ ಬಂದಿದೆ. ಅದರಲ್ಲಿ ಸೊಸೈಟಿ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಹೇಳುತ್ತಾರೆ. ಲಿಕ್ವಿಡೇಷನ್ ಬಗ್ಗೆ ವರದಿ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಎಸ್. ಎಸ್. ಅತಕೇರಿ.—ಅಲ್ಲಿನ ಮ್ಯಾನೇಜಿಂಗ್ ಕಮಿಟಿಯವರ ಮೇಲೆ ಏನು ಕ್ರಮವನ್ನು ತೆಗದುಕೊಂಡಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಲಿಕ್ವಿಡೇಷನ್ ಬಗ್ಗೆ ತೀರ್ಮಾನವಾದಮೇಲೆ ಆ ವಿಚಾರ ಹೇಳಲಿಕ್ಕೆ ಬರುತ್ತದೆ.

ಶ್ರೀ ಜಿ. ತಮ್ಮಣ್ಣ. ಸೊಸೈಟಿಯು ಡೈರೆಕ್ಟರ್ಸ್ ಜೊತೆಯಲ್ಲಿ ಅಧಿಕಾರಿಗಳೂ ಸಹ ಸೇರಿ ಕೊಂಡಿದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಸೊಸೈಟಿಯು ಬಗ್ಗೆ ಈಗಾಗಲೇ ಸರ್ಕಾರದವರು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಸದಸ್ಯರು ಏನಾದರೂ ಅಂತಹ ಅಧಿಕಾರಿಗಳ ಪಟ್ಟಿಯನ್ನು ಕಳುಹಿಸಿಕೊಟ್ಟರೆ, ಅದನ್ನೂ ಸಹ ವಿಚಾರಮಾಡುತ್ತೇನೆ.

ಶ್ರೀ ಹಂಪಿ ಶಿವಣ್ಣ. - ಈಗ 7-8 ವರ್ಷಗಳಿಂದ ಕೆಲಸ ಮಾಡದೇ ಇರುವ ಸೊಸೈಟಿಗಳನ್ನು ನೂಪರ್‌ಸೀಡ್ ಮಾಡುವುದಕ್ಕೆ ರಕಮೆಂಡ್ ಮಾಡಿದ್ದರೂ ಕೂಡ ಅವುಗಳಿಗೆ ಏತಕ್ಕೆ ಕಾಲಾವಕಾಶ ವನ್ನು ಕೊಟ್ಟಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಇಂಥಾದ್ದೇ ಸೊಸೈಟಿ ಎಂದು ತಾವು ಕೇಳಿದರೆ ಅದರ ಬಗ್ಗೆ ಹೇಳಬಹುದು. ತಾವು ಜನರಲ್ ಪ್ರಶ್ನೆ ಕೇಳುತ್ತಿದ್ದೀರಿ, ಅಂಥಾದ್ದು ಯಾವುದಾದರೂ ಸೊಸೈಟಿಯ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಉಗ್ರ ಕ್ರಮತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದು ಮುಂದು ನೋಡುವುದಿಲ್ಲ ಎಂದು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಎನ್. ಲೋಕಯ್ಯನಾಯಕ್.—ಈ ಸೊಸೈಟಿಯು ಕೇಸನ್ನು ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಈಗ ಮಾತುವುದಕ್ಕೆ ಬರುವುದಿಲ್ಲ. ಲಕ್ವಿಡೇಷನ್ ಪ್ರೊಸೆಸ್ ಮುಗಿಯುವ ತನಕ ಏನೂ ಮಾಡುವುದಕ್ಕಾಗುವುದಿಲ್ಲ.

Jobs to Demobilised Emergency Commissioned Officers

50. **Smt. WINNIFRED F. FERNANDES** (Coondapur).—

Will the Chief Minister be pleased to state :—

whether they would consider the desirability to provide the demobilised emergency commissioned officers with suitable jobs under the State Government as and when they are demobilised ?

A.—**Sri R. M. PATIL** (Minister for Home and Municipal Administration) [on behalf of SRI S. NIJALINGAPPA (Chief Minister)].—

Yes.

Smt. WINNIFRED F. FERNANDES.—May I know where you will appoint or accommodate these commissioned officers ater demobilisation ?

† **Sri R. M. PATIL.**—The Government of India has decided to make the following arrangements :—

	Department	*Percentage of vacancies reserved*
1.	Indian Administrative Service and Indian Foreign Service (both put together) ...	20 per cent
2.	Indian Police Service ...	30 per cent
3.	Central Services posts Class-I non-technical including those under Railwagys ...	25 per cent
4.	Central Services posts, including Railways, Class-II ...	30 per cent

In view of the decision of the Government of India, the State Government is considering to accommodate these officers in the following way, *i.e.*, to reserve 15 per cent of the posts of Class-I and Class-II in Mysore Administrative Service, 25 per cent of the posts in Class-II in Mysore Police Service, 20 per cent of the permanent vacancies in Class-IV posts and 10 per cent of the permanent vacancies in Class-III posts in several Departments. Further, due to legal and technical difficulties, this matter has been referred to the Government of India for consultation.